**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ ಇವರು ನಿಯಮ-330 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ಸಲ್ಲಿಸುವ ಬಗ್ಗೆ**

ವಿಷಯ

ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸರ್ಕಾರಿ ವಸತಿಯುತ ಕಿವುಡ ಮಕ್ಕಳ ಶಾಲೆಯ ಅಂಗವಿಕಲ ಶಿಕ್ಷಕರಿಗೆ ಮಾನ್ಯ ಲೋಕಾಯುಕ್ತರ ಆದೇಶ ದಿನಾಂಕ:13.06.2019 ಹಾಗೂ ದಿನಾಂಕ:17.07.2019 ರಂದು ಆರ್ಥಿಕ ಇಲಾಖೆ ಸಹಮತಿ ಪ್ರಕಾರ ವಿಶೇಷ ವಿಲೀನಾತಿ ನಿಯಮಗಳನ್ನು ರೂಪಿಸಿ, ಹಾಲಿ ಸಿಬ್ಬಂದಿಗಳಿಗೆ ಜೇಷ್ಠತೆಯನ್ನು ನಿಗದಿಗೊಳಿಸಿ, 3 ತಿಂಗಳಲ್ಲಿ ನಿವೃತ್ತ ಶಿಕ್ಷಕರಿಗೆ ಪಿಂಚಣಿ ನೀಡುವುದಾಗಿ ಮಾನ್ಯ ಇಲಾಖಾ ಸಚಿವರು ಸಂಖ್ಯೆ:ಮಮಇ:30:ಪಿಹೆಚ್‌ಪಿ:2021 ರಲ್ಲಿ ಭರವಸೆ ನೀಡಿರುತ್ತಾರೆ.

ಆದರೆ, ಮಾನ್ಯ ಸಚಿವರು ಕಳೆದ 6 ಅಧಿವೇಶನಗಳಿಂದಲೂ ಭರವಸೆ ನೀಡುತ್ತಿದ್ದು, ಇದುವರೆಗೂ ವಿಲೀನಾತಿ ನಿಯಮಗಳನ್ನು ರೂಪಿಸಿ, ಜೇಷ್ಠತೆಯನ್ನು ನಿಗದಿಪಡಿಸಿರುವುದಿಲ್ಲ. ಆರ್ಥಿಕ ಸಂಕಷ್ಟದಲ್ಲಿರುವ ನಿವೃತ್ತ ಸಿಬ್ಬಂದಿಗಳಿಗೆ ಕೂಡಲೇ ಪಿಂಚಣಿ ನೀಡುವ ಬಗ್ಗೆ.

ಉತ್ತರ

ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ಸಂಬಂಧ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ: 136 ವೆಚ್ಚ-10/2018, ದಿ: 17.07.2019ರಲ್ಲಿ ಪಿಂಚಣಿ ನೀಡಲು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿರುತ್ತದೆ. ಆದರೆ ಆರ್ಥಿಕ ಇಲಾಖೆಯು ಸದರಿ ಶಾಲೆಯನ್ನು ಸರ್ಕಾರದ ವಶಕ್ಕೆ ವಹಿಸಿಕೊಳ್ಳಲು ಮತ್ತು ಈ ಉದ್ದೇಶಕ್ಕಾಗಿ ಈ ರೀತಿ ಸರ್ಕಾರ ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದು, ಈ ಅಂಶಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ನಿರ್ಧರಣೆಯು ಸದರಿ ಸಂಸ್ಥೆಯ ಆಡಳಿತ ನಿರ್ವಹಣೆಯನ್ನು ಸರ್ಕಾರವು ವಹಿಸಿಕೊಂಡು ಯಥಾವತ್ತಾಗಿ ಸದರಿ ಸಂಸ್ಥೆ/ಶಾಲೆಯನ್ನು ಅನುದಾನಿತ ಸಂಸ್ಥೆ ಸ್ಥಾನಮಾನದೊಂದಿಗೆ ಮಾತ್ರ ಮುಂದುವರೆಸುವುದಾಗಿತ್ತೇ? ಅಥವಾ ಸಂಪೂರ್ಣವಾಗಿ ಖಾಯಂ ಆಧಾರದ ಮೇರೆಗೆ ವಶಕ್ಕೆ ಪಡೆದು ಸರ್ಕಾರದ ಶಾಲೆಯಾಗಿ ಮಾರ್ಪಡಿಸಿ ಅಲ್ಲಿನ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಸಿವಿಲ್ ಸೇವಾ ವ್ಯಾಪ್ತಿಯಲ್ಲಿ ವಿಲೀನಗೊಳಿಸುವ ಉದ್ದೇಶವನ್ನು ಹೊಂದಿರುವುದಾಗಿದೆಯೇ? ಎಂಬ ಬಗ್ಗೆ ಪರಿಶೀಲಿಸಿ ನಿರ್ಧರಣೆ ತಳೆಯಬೇಕಾಗಿರುವುದರಿಂದ ಈ ಎಲ್ಲಾ ವಾಸ್ತವಾಂಶಗಳ ಆಧಾರದ ಮೇರೆಗೆ ಈ ನಿರ್ಧರಣೆಯನ್ನು ತಳೆಯಬೇಕಿದೆ ಎಂದೂ, ಆ ನಂತರದಲ್ಲಿ ಇಲ್ಲಿನ ಸಿಬ್ಬಂದಿ ವರ್ಗದವರನ್ನು ಸಿವಿಲ್ ಸೇವಾ ವ್ಯಾಪ್ತಿಗೊಳಪಡಿಸಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಲ್ಲಿ ಆಡಳಿತಾತ್ಮಕ ನಿರ್ಧರಣೆ ತಳೆದಲ್ಲಿ, ಈ

ಅಂಶಗಳನ್ನೊಳಗೊಂಡಂತೆ ಅಧಿಸೂಚನೆ ಮುಖಾಂತರ ವಿಶೇಷ ವಿಲೀನಾತಿ ನಿಯಮಗಳನ್ನು ರಚಿಸಿ ಅಧಿಸೂಚನೆ ಹೊರಡಿಸಬೇಕಾಗಿದೆ ಎಂದೂ, ಇಂತಹ ಸಂಧರ್ಭದಲ್ಲಿ, ಸದರಿ ಸಂಸ್ಥೆಯನ್ನು ಸರ್ಕಾರದ ಭಾಗವಾಗಿ ಪರಿಗಣಿಸಬೇಕಾದ ದಿನಾಂಕದ ಕುರಿತು ನಿರ್ಧರಣೆ ತಳೆದು "Appointed Day" ಅಂಶವನ್ನು ನಿರ್ಧರಿಸತಕ್ಕದ್ದು, ಅಲ್ಲಿನವರೆಗೆ ಈ ಸಂಸ್ಥೆಯ ನೌಕರರು ಅನುದಾನಿತ ಶಾಲಾ ಸಿಬ್ಬಂದಿ ವ್ಯಾಪ್ತಿಗೊಳಪಟ್ಟು ಟಿ.ಬಿ.ಸ್ ನಿಯಮಗಳನ್ವಯ ಪಿಂಚಣಿ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದು ಎಂದು ಅಭಿಪ್ರಾಯ ನೀಡಿದೆ. ದಿ:01.04.2006ರ ನಂತರದ ಪ್ರಕರಣಗಳಲ್ಲಿ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆ ಪರಿಗಣನೆಗೆ ಅವಕಾಶವಿಲ್ಲವಾದ್ದರಿಂದ "Appointed Day" ದಿನಾಂಕದಿಂದ ಅನ್ವಯಿಸಿ ಇಲ್ಲಿನ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ ನಿಯತಗೊಳಿಸಬೇಕಾಗಿರುವುದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದರೆ ಈ ಸಂಬಂಧ ಹಿಂದಿನ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಸಿ.ಆ.ಸು.ಇ (ಸೇವಾ ನಿಯಮಗಳು), ಆರ್ಥಿಕ ಇಲಾಖೆ, ಮತ್ತು ಸಮಾಜ ಕಲ್ಯಾಣ ಇಲಾಖೆ ಪ್ರತಿನಿಧಿಗಳನ್ನೊಳಗೊಂಡಂತೆ ಸಭೆ ನಡೆದಿದ್ದು, ಈ ಹಿಂದೆ ಮೀಸಲಾತಿ ಅಳವಡಿಸದೇ ಇರುವುದರಿಂದ ಇದಕ್ಕೆ ಒಂದು ಬಾರಿಗೆ ವಿನಾಯಿತಿ ನೀಡಲು ಚರ್ಚಿಸಲಾಗಿ, ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ಈ ಪ್ರಸ್ತಾವನೆಯನ್ನು ಒಪ್ಪಿರುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಸಿಬ್ಬಂದಿಯನ್ನೊಳಗೊಂಡಂತೆ ಮೀಸಲಾತಿಯನ್ನು ಅನುಸರಿಸದೇ ನೇಮಕಾತಿಯನ್ನು ಈಗಾಗಲೇ ಮಾಡಿಕೊಂಡಿರುವ ಹಿನ್ನಲೆಯಲ್ಲಿ, ನೇಮಕಾತಿ ನಿಯಮಗಳನ್ವಯ ಕ್ರಮ ವಹಿಸಲು ಈ ಸಂಬಂಧ ಒಂದು ಬಾರಿಗೆ ವಿನಾಯಿತಿ ನೀಡಿ, ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಇತ್ಯರ್ಥಗೊಳಿಸಲು ಸಚಿವ ಸಂಪುಟ ಸಭೆಯ ಅನುಮೋದನೆ ಪಡೆದು ಸಿಬ್ಬಂದಿಗಳ ಪಿಂಚಣಿ ಸೌಲಭ್ಯವನ್ನು ಒದಗಿಸುವ ಕುರಿತು ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ: ಮಮಇ 88 ಪಿಹೆಚ್‌ಪಿ 2021**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು